ತಿರುಗಿಸಿ ಪುಟ್ಟದ್ದಾಗಿ ನಕ್ಕು, 'ತಗೋ ಸಾನ್ವಿ' ಎಂದ. ಸಾನ್ವಿಯ ಮುಖದಲ್ಲಿ ಪುಟ್ಟದ್ದೊಂದು ನಗುವೂ ಹೊಮ್ಮಲಿಲ್ಲ. ಸೋಫಾದಿಂದ ಎದ್ದು ಯಾಂತ್ರಿಕವಾಗಿ ಟ್ಯಾಬ್ ತಗೊಂಡು ಮತ್ತೆ ಸೋಫಾ ಏರಿ ಕೂತಳು.

'ನೋಡು, ನಂಗಿವತ್ತು ನೈಟ್ ಶಿಫ್ಟ್, ಮೀಟಿಂಗೂ ಇದೆ. ಅಮ್ಮ ಆಫೀಸಿಂದ ಇನ್ನೇನು ಬರ್ಬೋದು' ಎಂದು ಒಳಕೋಣೆ ಸೇರಿ ಲ್ಯಾಪ್‌ಟಾಪಿನ ನಿಶ್ಚಲ ಬೆಳಕಿನಲ್ಲಿ ಕಳೆದೇಹೋದ ಶಶಿಕಿರಣ. ಮನೆ ತುಂಬಾ ಅಸಹನೀಯವಾದ ನೀರವತೆ ಆವರಿಸಿತು. ಆ ನೀರವತೆಯಲ್ಲಿಯೇ ಮತ್ತೊಂದು ವಿಮಾನ ಆಕಾಶದಲ್ಲಿ ತೇಲಿಹೋಯ್ತು. ಪ್ರತೀ ದಿನವೂ ಶಾಲೆಯಿಂದ ಬಂದ ತಕ್ಷಣ ತನ್ನ ಸುತ್ತ ಆವರಿಸಿಕೊಳ್ಳುವ ವಿಚಿತ್ರ ಮೌನ, ಒಮ್ಮೆ ಯಾರೂ ಇಲ್ಲದಂತಾಗಿ ಎಲ್ಲವೂ ಬೋರು. ಆಟ, ಟೀವಿ, ಬಣ್ಣದ ಪೆನ್ಸಿಲು, ಅಪಾರ್ಟುಮೆಂಟು, ವಿಮಾನ, ಹೀಗೆ ಯಾವುದರಲ್ಲೂ ಬಣ್ಣವಿಲ್ಲ. ಇವೆಲ್ಲ ಸಪ್ಪೆ ಸಪ್ಪೆ ಎನ್ನುವಂತೆ ಅನ್ನಿಸಿ ಸಾನ್ವಿ ಮೌನವಾಗುತ್ತಿದ್ದಳು. ಮೊಬೈಲ್ ಗೇಮು, ಟೀವಿ, ಯುಟ್ಯೂಬ್, ಕಲರ್ ಬಾಕ್ಸ್, ಇವೆಲ್ಲವನ್ನೂ ಬಿಟ್ಟು ತಾನು ಬೇರೇನಾದರೂ ಮಾಡ್ಬೇಕು ಎಂದವಳು ಅಂದುಕೊಳ್ಳುತ್ತಿದ್ದರೂ ಬೇರೆ ಯಾವ ಆಟ ಆಡೋದು ಎಂದು ಗೊತ್ತಾಗದೇ ಸುಮ್ಮನಾಗುತ್ತಿದ್ದಳು. ಕೊನೆಗೆ ಏನೂ ಬೇಡವೆನ್ನಿಸಿ ಸುಮ್ಮನೇ ಕೂರುತ್ತಿದ್ದಳು.

ಶಶಿಕಿರಣ ಮತ್ತು ಶಾಲಿನಿ, ಹಿಡನ್ ಪರ್ಲ್ ಎನ್ನುವ ಈ ಐಷಾರಾಮಿ ಅಪಾರ್ಟ್‌ಮೆಂಟಿಗೆ ಬಂದು ಎರಡು ವರ್ಷವಾಗಿತ್ತು. ಮುಂಬೈ ನಗರದ ದೊಡ್ಡ ದೊಡ್ಡ ಐಟಿ ಕಂಪೆನಿಗಳು, ದೊಡ್ಡ ಮನುಷ್ಯರ ಮನೆಗಳು, ಗಾರ್ಡನ್‌ಗಳೇ ತುಂಬಿಕೊಂಡು ಎಲ್ಲೆಲ್ಲೂ ವೈಭೋಗವೇ ಕಾಣಿಸುವ ಈ ಜಾಗದಲ್ಲೊಂದು ಕೋಟಿ ಕೋಟಿ ಬೆಲೆಬಾಳುವ ಅಪಾರ್ಟ್‌ಮೆಂಟ್ ಖರೀದಿಸಬೇಕು ಎನ್ನುವ ಕನಸನ್ನು ಶಶಿಕಿರಣ, ಶಾಲಿನಿ ಕೆಲವೇ ವರ್ಷಗಳಲ್ಲಿ ಈಡೇರಿಸಿಕೊಂಡಿದ್ದರು. ಅವರಿಬ್ಬರ ಪ್ರತಿಷ್ಠಿತ ಆಫೀಸೂ ಈ ಸಿಟಿಯ ಐಟಿ ಹಬ್‌ಗಳಲ್ಲೇ ಇರೋದು. ತಮ್ಮ ಕಂಪನಿಯ ಗಾಜಿನ ಕಿಟಕಿಗಳಿಂದ ತಮ್ಮ ಹಿಡನ್ ಪರ್ಲ್ ಅಪಾರ್ಟ್‌ಮೆಂಟು ಹಿಡಿದುಕೊಂಡಿರುವ ಮುತ್ತುಗಳೆಲ್ಲಾ ಕಾಣಿಸುತ್ತವೆ. ಇಪ್ಪತ್ತು ಮಹಡಿಗಳಲ್ಲಿ ತಾವು ನೆಲೆಸಿರುವ ಹದಿನೆಂಟನೇ ಮಹಡಿ ಅಂತೂ ಇನ್ನಷ್ಟು ಹೊಳೆಯುವ ಮುತ್ತಿನಂತೆ ಕಾಣಿಸುತ್ತದೆ. ಎಂದೆಲ್ಲಾ ತರಹೇವಾರಿ ಯೋಚನೆಗಳೆಲ್ಲಾ ಬಂದಿದ್ದರಿಂದ ಈ ಅಪಾರ್ಟ್‌ಮೆಂಟ್ ಖರೀದಿಸಿದ್ದರು. ಬದುಕಿನಲ್ಲಿ ಹೀಗೆ ಹೊಸ ಹೊಸ ಐಶ್ವರ್ಯಗಳು ಕೂಡಿಕೊಂಡು ತಾವು ಹೊಸತಾಗುತ್ತೇವೆ, ವರುಷಕ್ಕೊಂದು ಕಾರು ಬದಲಾಯಿಸಬೇಕು, ಒಂದು ವರ್ಷ ಬಾಳಿದಂತೆ ಮುಂದಿನ ವರ್ಷ ಬಾಳಬಾರದು ಎನ್ನುವ ತತ್ತ್ವವನ್ನು ಗಂಡ ಹೆಂಡತಿ ರೂಢಿಸಿಕೊಂಡು ಬಂದಿದ್ದರು. ಸಾನ್ವಿಗೂ ಈ ಸಿಟಿಯಲ್ಲಿರುವ ಪ್ರತಿಷ್ಠಿತ ಗೋಲ್ಡ್ ಗಾರ್ಡನ್ ಸ್ಕೂಲಿಗೆ ಸೇರಿಸೋಣ, ಆಫೀಸು, ಮನೆ, ಸ್ಕೂಲು ಎಲ್ಲವೂ ಹತ್ತಿರವಿದ್ದರೆ ಮೂವರೂ ಆರಾಮಾಗಿರಬಹುದು ಎಂದುಕೊಂಡು ಗೋಲ್ಡ್ ಗಾರ್ಡನ್ ಸ್ಕೂಲಿಗೆ ಸೇರಿಸಿದ್ದರು.

ಕೋಟಿ ಕೋಟಿ ಬೆಲೆಯ ಅಪಾರ್ಟುಮೆಂಟು, ಅಲ್ಲಿಂದ ಆಫೀಸು, ಕೆಲಸವೆಲ್ಲಾ ಮುಗಿಸಿ ಮನೆಗೆ ಬಂದರೆ ಸಾಕೆಂದು ಅನ್ನಿಸಿ, ಮನೆಗೆ ಬಂದ ಕೂಡಲೇ ಆಫೀಸಿನ ಜಂಜಾಟದ ಬಿಸಿ, ತಲೆನೋವು, ರೇಗಾಟ, ಹಾರಾಟ, ಎಲ್ಲವೂ ಕರಗುತ್ತದಲ್ಲ ಎಂದುಕೊಳ್ಳುವ ಹೊತ್ತಿಗೆ, ಮತ್ತೆ ಮನೆ, ಅಡುಗೆ, ಕ್ಲೀನಿಂಗ್, ಸಾನ್ವಿಯ ಆರೈಕೆ, ಇವೆಲ್ಲವನ್ನೂ ಬ್ಯಾಲೆನ್ಸ್ ಮಾಡುತ್ತ, ಮತ್ತೆ ಹೊಸತೇ ಆದ ಚೀರಾಟ, ತಲೆನೋವು ಹುಟ್ಟಿಕೊಂಡಂತೆ ಅವರಿಬ್ಬರಿಗೂ ಅನ್ನಿಸುತ್ತಿತ್ತು.

ಶಶಿಕಿರಣನಿಗಿಂತಲೂ ಶಾಲಿನಿಗೆ ಸಾನ್ವಿಯ

